ವಸೀಮ್ ಬರೇಲವಿಯವರ ಒಂದು ಶಾಯರಿಯನ್ನು ಕೂಡ ಇದೀಗ ಹೇಳ ಬೇಕೆನಿಸುತ್ತಿದೆ.

ಕಿಸ್ ಕಾಮ್ ಕೀ ರಹೀ ಯೇ
ದಿಖಾವೇಕಿ ಜಿಂದಗಿ

ವಾದೆ ಕರೆ ಕಿಸೀ ಸೆ
ಗುಝಾರಿ ಕಿಸೀಕೆ ಸಾಥ್

(ಯಾವ ಉದ್ದೇಶಕ್ಕಾಗಿ ಈ
ತೋರಿಕೆಯ ಬದುಕು
ಆಣೆ ಪ್ರಮಾಣ ಒಬ್ಬನೊಂದಿಗೆ
ಬದುಕಿನ ಬಂಡಿ ಇನ್ನೊಬ್ಬನೊಂದಿಗೆ)

ಈ ಶಾಯರಿಗಳು ಆಕಸ್ಮಿಕವಾಗಿ ನನ್ನ ನೆನಪಿನಲ್ಲಿ ಮುಳುಗೆದ್ದವು. ಇದು ಸಾಂದರ್ಭಿಕವಾದ ಭಾವ ಅಷ್ಟೇ. ಜೀವದಲ್ಲಿ ಎರಡು ಆಕಸ್ಮಿಕಗಳ ಸಾಧ್ಯತೆ ಮಾತ್ರ ಇದೆ. ಯಾರನ್ನು ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತೇವೋ ಆಕೆ ಅಥವಾ ಅವನು ಸಿಗದೆ ವಿರಹದ ಬೇಗೆಯಲ್ಲಿ ಬೇಯುವುದು ಒಂದು; ಎರಡನೆಯದಾಗಿ ಅಂತಹ ಪ್ರೀತಿ ಪಾತ್ರ ವ್ಯಕ್ತಿ ಜೀವನ ಸಂಗಾತಿಯಾಗುವುದು ಇನ್ನೊಂದು ಆಕಸ್ಮಿಕ. ನೀನು ನಿರೀಕ್ಷಿಸಿದಂತೆ ನನ್ನ ಹಗಲು ರಾತ್ರಿ ನೀನು ಎಂತಲೂ ಮತ್ತು ನನಗೆ ಅವನಿಂದ ಯಾವುದೇ ಸುಖವಿಲ್ಲ ಎಂದು ನಾನು ಹಲುಬುತ್ತಾ ನನ್ನ ಹಂಬಲಗಳನ್ನು ನಿನ್ನೊಡನೆ ಹಂಚಿಕೊಳ್ಳುತ್ತೇನೆ ಅಂತಲೂ ನಿರೀಕ್ಷಿಸಬೇಡ. ಆದರೆ, ಎಲ್ಲೋ ಒಂದು ಕಡೆ ನಾನು ಎಷ್ಟೇ ನಿರ್ಲಿಪ್ತಳು ಅಂತ ಅಂದುಕೊಂಡರೂ ಮತ್ತು ಬೇರೆಯವರ ಗೊಡವೆ ನನಗೆ ಬೇಡ ಅಂತ ಅಂದುಕೊಂಡರೂ ಒಂದು ರೀತಿಯಲ್ಲಿ ಅತ್ಯಂತ ನೆಮ್ಮದಿಯ ಮತ್ತು ಸುಖೀಭಾವ ಹಾದು ಹೋದದ್ದು ಕಳೆದವಾರ ನಿನ್ನ ಸುದ್ದಿ ತಿಳಿದುಬಂದಾಗಿನಿಂದ.

ನೀನು ಮತ್ತು ವಸುಮತಿ ವಿಚ್ಛೇದನದ ದಾವೆಯಲ್ಲಿ ಮುಳುಗಿದ್ದೀರಿ ಮತ್ತು ನಿಮಗೆ ಹುಟ್ಟಿರುವ ಹೆಣ್ಣು ಕೂಸಿಗಾಗಿ ಕೋರ್ಟಿನಲ್ಲಿ ಬಡಿದಾಡುತ್ತಿದ್ದೀರಿ ಎಂಬ ಸುದ್ದಿ ಬಂದಾಗಿನಿಂದ ಬೇಸಿಗೆಯ ತಂಪೆಲರು ಸುಳಿದಾಡಿದಂತೆ ಹಾಯೆನಿಸುತ್ತಿದೆ. ಒಂಥರಾ ಮಕ್ಕಳಿದ್ದಾಗ ಅನಿಸುತ್ತಿತ್ತು ನೋಡು, ‘ಹಂಗೆ ಆಗಬೇಕು’ ಅಂತ! ಆ ಭಾವ ನನ್ನಲ್ಲಿ ಹಾದುಹೋಯಿತು. ಮತ್ತೊಮ್ಮೆ ಹೇಳುತ್ತೇನೆ ಹಂಗೆ ಆಗಬೇಕು; ಹಲವಾರು ನೋವುಗಳ ಕಟಕಟೆಯಲ್ಲಿ ನಿಂತು ಹಲವಾರು ನೋವುಗಳ ಉತ್ತರಗಳನ್ನು ನೀನು ಕೊಡಬೇಕು; ಆ ಎಲ್ಲಾ ಯಾತನೆಯನ್ನು ನೀನು ಏಕಾಂಗಿಯಾಗಿ ಅನುಭವಿಸಬೇಕು; ನಿನ್ನ ಕಂಬನಿಯನ್ನು ಒರೆಸುವ ಕೈ ನಿನಗೆ ಸಿಗಬಾರದು ಎಂದು ಅಂತರ್ಯದಲ್ಲಿಯೇ ಪ್ರಾರ್ಥಿಸಿದೆ. ಆದರೂ ಅಂತಿಮವಾಗಿ ನನ್ನದೊಂದು ಪ್ರಶ್ನೆ ಉಳಿದೇ ಹೋಯಿತು.

ಇಡೀ ಮುಸ್ಲಿಂ ಸಮುದಾಯದಲ್ಲಿ ಪುರುಷರು ಮಹಿಳೆಯರ ಮೇಲ್ವಿಚಾರಕರು ಎಂಬ ಶ್ರೇಯಸ್ಸನ್ನು ತಮ್ಮ ಮೇಲೆ ತಾವೇ ಹೇರಿಕೊಳ್ಳುತ್ತಾರೆ. ಆದರೆ, ಆಚರಣೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಕೂಡ ಟೆರರಿಸ್ಟ್‌ಗಳು ಎಂಬ ಬಿರುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕದಂತೆ ಧರಿಸಿದ್ದಾರೆ. ಸ್ವಲ್ಪ ಸುಳ್ಳಿರಬಹುದು ಈ ಆರೋಪದಲ್ಲಿ; ಪೂರ್ತಾ ಸುಳ್ಳು ಎಂದು ನನಗೆ ಅನಿಸುವುದಿಲ್ಲ. ಹಾಗೂ ತಮ್ಮ ಹೆಣ್ಣುಮಕ್ಕಳನ್ನು ಸಂಪೂರ್ಣವಾಗಿ ತಮ್ಮ ಅಧೀನದಲ್ಲಿರಿಸಿಕೊಂಡು ಅವರ ಸರ್ವಸ್ವವನ್ನು ಕೂಡ ನಿಯಂತ್ರಿಸುತ್ತಾ ತಾವು ಮಾತ್ರ ಬೇರೆ ಹೆಣ್ಣುಮಕ್ಕಳೊಡನೆ ಮುಕ್ತ ಸಂದರ್ಭಗಳನ್ನು ಅನುಭವಿಸುತ್ತಾರೆ. ಅವರನ್ನು ಮದುವೆಯಾಗುತ್ತಾರೆ, ಅವರನ್ನು ತಾಯಂದಿರನ್ನಾಗಿ ಮಾಡುತ್ತಾ,